# ಸ್ವಾಮಿ ವಿವೇಕಾನಂದರ ಅಮರನಾಥ ಯಾತ್ರೆ

**ಸೋದರಿ ನಿವೇದಿತಾ**

ಸ್ವಾಮಿ ವಿವೇಕಾನಂದರ ಪಾಶ್ಚಾತ್ಯ ಶಿಷ್ಯಂದಿರಲ್ಲಿ ಪ್ರಮುಖಳಾದ ಸೋದರಿ ನಿವೇದಿತಾ ತನ್ನ ಎರಡು ಗ್ರಂಥಗಳಲ್ಲಿ ಸ್ವಾಮಿ ವಿವೇಕಾನಂದರ ಅಮರನಾಥ ಯಾತ್ರೆಯ ಬಗ್ಗೆ ಮಹತ್ವಪೂರ್ಣವಾದ ವಿವರಗಳನ್ನು ನೀಡುತ್ತಾಳೆ. ಸ್ವತಃ ತಾನೂ ಅವರೊಂದಿಗೆ ಯಾತ್ರೆ ಹೋಗಿದ್ದು, ತಮ್ಮ ಗುರುಗಳ ಯಾತ್ರೆ ಹಾಗೂ ಅಮರನಾಥನ ದರ್ಶನದ ಬಗ್ಗೆ ಅತ್ಯಂತ ನಿಕಟವಾದ ವರದಿಯನ್ನು ನೀಡಿದ್ದಾಳೆ. ಅವಳ ಎರಡು ಗ್ರಂಥಗಳಿಂದ ಆಯ್ದ ಭಾಗಗಳನ್ನಿಲ್ಲಿ ಓದುಗರಿಗಾಗಿ ನೀಡುತ್ತಿದ್ದೇವೆ.



## 'ನಾ ಕಂಡಂತೆ ನನ್ನ ಗುರುದೇವ' ಗ್ರಂಥದಿಂದ ಆಯ್ದ ಭಾಗಗಳು

ಒಂದು ದಿನ ಆಚ್‌ಬಾಲ್ ಎಂಬಲ್ಲಿ ಮೊಗಲ ತೋಟದಲ್ಲಿ ಹೊರಗೆ ಊಟಕ್ಕೆ ಕುಳಿತಾಗ ಸ್ವಾಮೀಜಿ ಇದ್ದಕ್ಕಿದ್ದಂತೆಯೆ ತಾವು ಯಾತ್ರಿಕರೊಡನೆ ಅಮರನಾಥಕ್ಕೆ ಹೋಗುವುದಾಗಿ ಹೇಳಿದರು. ಜೊತೆಗೆ ತಮ್ಮ ಮಗಳನ್ನೂ ಕರೆದುಕೊಂಡು ಹೋಗುತ್ತೇನೆ ಎಂದರು. ನಮ್ಮವರೆಲ್ಲಾ ನನ್ನನ್ನು ಇದಕ್ಕಾಗಿ ಅಭಿನಂದಿಸಿದರು. ಅದೃಷ್ಟಶಾಲಿಗೆ ಯಾವ ವಿಘ್ನವನ್ನೂ ಯಾರೂ ತಂದೊಡ್ಡಲಿಲ್ಲ. ಇದರಿಂದ ಮತ್ತು ಯಾತ್ರೆಯ ವಿಚಾರವನ್ನು ನೋಡಿಕೊಳ್ಳುತ್ತಿದ್ದ ಪ್ರಾಂತ್ಯಾಧಿಕಾರಿಯ ಸಹಾಯದಿಂದ ಒಂದು ಅಪೂರ್ವ ಅನುಭವವನ್ನು ನೀಡುವ ಯಾತ್ರೆಗೆ ಸನ್ನಾಹಗಳು ಪ್ರಾರಂಭವಾದವು.

ಆ ಕಾಲದಲ್ಲಿ ಕಾಶ್ಮೀರವು ಯಾತ್ರಾರ್ಥಿಗಳಿಂದ ತುಂಬಿತುಳುಕಾಡುವಂತೆ ಇತ್ತು. ನಾವು ಯಾತ್ರೆಗೆ ಅಣಿಯಾಗಲು ಆಚ್‌ಬಾಲನ್ನು ಬಿಟ್ಟು ಇಸ್ಲಾಮಾಬಾದಿಗೆ ಬಂದೆವು. ಎಲ್ಲೆಲ್ಲಿಯೂ ಸಂಚರಿಸುತ್ತಿರುವ ಯಾತ್ರಿಕ ತಂಡವೇ ಕಾಣುತಿತ್ತು. ಇವರಲ್ಲಿ ಯಾವ ಸದ್ದುಗದ್ದಲವೂ ಇರಲಿಲ್ಲ ; ಒಂದು ಕ್ರಮವಿತ್ತು. ನೋಡುವುದಕ್ಕೆ ದೃಶ್ಯ ಅಂದವಾಗಿ ಕಾಣುತ್ತಿತ್ತು. ಎರಡು ಮೂರು ಸಾವಿರ ಜನ ರಾತ್ರಿ ಒಂದು ಬಯಲಿನಲ್ಲಿ ತಂಗುವರು. ಬೆಳಿಗ್ಗೆ ಅಷ್ಟು ಹೊತ್ತಿಗೇ ಎದ್ದು ಹೊರಡುತ್ತಿದ್ದರು. ನೆನ್ನೆ ಅವರು ಅಲ್ಲಿ ತಂಗಿದ್ದರು ಎಂಬುದಕ್ಕೆ ತಂಗುವ ಕಡೆ ಬಿಟ್ಟ ಒಲೆಬೂದಿಯಲ್ಲದೆ ಮತ್ತೇನೂ ಅಲ್ಲಿ ಕಾಣುತ್ತಿರಲಿಲ್ಲ. ಅವರ ಜೊತೆಯಲ್ಲಿ ಒಂದು ಅಂಗಡಿಯ ಬೀದಿಯೇ ಹೋಗುತ್ತಿತ್ತು. ಹೋದಲ್ಲೆಲ್ಲ ಡೇರೆಯನ್ನು ಹೂಡಿ ಅಂಗಡಿಯನ್ನು ಅಷ್ಟು ಶೀಘ್ರದಲ್ಲಿ ತೆರೆದುಬಿಡುತ್ತಿದ್ದರು. ಇಂತಹ ಒಂದು ವ್ಯವಸ್ಥೆ ಅವರೊಡನೆ ಜನ್ಮತಃ ಬಂದಂತೆ ಇತ್ತು. ಶಿಬಿರದ ಮಧ್ಯ ಭಾಗದಲ್ಲಿ ದೊಡ್ಡದೊಂದು ರಸ್ತೆ ಇರುತ್ತಿತ್ತು. ಪಕ್ಕದಲ್ಲಿದ್ದ ಅಂಗಡಿಯಲ್ಲಿ ಒಣಗಿದ ಹಣ್ಣು, ಹಾಲು, ಬೇಳೆ, ಅಕ್ಕಿ ಮೊದಲಾದುವನ್ನು ಕೊಳ್ಳಬಹುದಾಗಿತ್ತು. ಯಾವುದಾದರೊಂದು ಎತ್ತರವಾದ ಕಡೆ ತಹಶೀಲ್ದಾರ ಮತ್ತು ಅವರ ಎಡಬಲಗಳಲ್ಲಿ ನನ್ನ ಮತ್ತು ಸ್ವಾಮೀಜಿಯ ಡೇರೆಯನ್ನು ಹೂಡುತ್ತಿದ್ದರು. ಇಲ್ಲೇ ಜನರು ನೆರೆಯಲು, ಮಾತುಕತೆಯಾಡಲು ಅವಕಾಶವಾಗುತ್ತಿತ್ತು.

ಎಲ್ಲಾ ಪಂಥಗಳಿಗೆ ಸೇರಿದ ಸಾವಿರಾರು ಸಾಧುಗಳಿದ್ದರು. ಎಲ್ಲರಿಗೂ ಗೈರಿಕ ವಸನದ ಡೇರೆ. ಕೆಲವರ ಡೇರೆಯಂತೂ ಛತ್ರಿಗಿಂತ ಸ್ವಲ್ಪ ದೊಡ್ಡದಾಗಿತ್ತು. ಸಾಧುಗಳ ಮೇಲೆ ಸ್ವಾಮೀಜಿ ಅವರ ಪ್ರಭಾವ ಅದ್ಭುತವಾಗಿತ್ತು. ಇವರಲ್ಲಿ ಹೆಚ್ಚು ಬುದ್ಧಿವಂತರಾದವರು ಪ್ರತಿಯೊಂದು ತಂಗುವ ಕಡೆಯೂ ಸ್ವಾಮೀಜಿಯ ಡೇರೆಗೆ ಹೋಗು

ತ್ತಿದ್ದರು. ಬೆಳಕಿರುವ ತನಕ ಅವರೊಡನೆ ಸಂಭಾಷಣೆಯಲ್ಲಿ ನಿರತ ರಾಗಿರುತ್ತಿದ್ದರು. ಅನಂತರ ಸ್ವಾಮೀಜಿ ಹೇಳಿದರು, ''ಅವರು ಮಾತನಾಡುತ್ತಿದ್ದುದೆಲ್ಲ ಶಿವನಿಗೆ ಸಂಬಂಧಪಟ್ಟದ್ದು'' ಎಂದು.

ನಾವು ಇಸ್ಲಾಮಾಬಾದನ್ನು ಬಿಟ್ಟಮೇಲೆ ಯಾತ್ರಿಕರನ್ನು ಭವನ್ ಎಂಬ ಕಡೆ ಪುನಃ ಸಂಧಿಸಿದೆವು. ಇದು ಹಲವು ತೀರ್ಥಗಳಿಗೆ ಪ್ರಖ್ಯಾತವಾದ ಸ್ಥಳ. ರಾತ್ರಿ ಆ ಕೊಳದ ಶುಭ್ರವಾದ ನೀರಿನಲ್ಲಿ ಪ್ರತಿ ಬಿಂಬಿಸುತ್ತಿದ್ದ ದೀಪದ ಕಾಂತಿ, ದೇವಸ್ಥಾನದಿಂದ ದೇವಸ್ಥಾನಕ್ಕೆ ಗುಂಪುಗುಂಪಾಗಿ ಹೋಗುತ್ತಿದ್ದ ಯಾತ್ರಿಕರ ತಂಡ, ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತೆ ಇದೆ.

ಪಹಿಲ್‌ಗಾಮ್ ಎಂಬುದು ಕುರುಬರ ಒಂದು ಗ್ರಾಮ. ಅಂದು ಏಕಾದಶಿಯಾದುದರಿಂದ ಅಲ್ಲೇ ಯಾತ್ರಿಕರು ತಂಗಿದ್ದರು. ಈ ಗ್ರಾಮವು ಸುಂದರವಾದ ಬೆಟ್ಟದ ಕೊರಕಲು ಪ್ರದೇಶದಲ್ಲಿತ್ತು. ಮೇಲಿನ ಬೆಟ್ಟದಿಂದ ನದಿಯೊಂದು ಹರಿದುಬರುತ್ತಿತ್ತು. ಅದರಲ್ಲಿ ಮಧ್ಯೆ ಮಧ್ಯೆ ಮರಳು ದಿಬ್ಬಗಳ ದ್ವೀಪಗಳು. ನದಿಯ ಕೆಳಗಾ ದರೋ ಮೇಲಿಂದ ಹರಿದು ಬಂದು ನುಣುಪಾದ ಕಲ್ಲಿನ ರಾಶಿ, ಅದರ ತೀರದಲ್ಲಿದ್ದ ಬೆಟ್ಟವಂತೂ ಪೈನ್ ಮರಗಳಿಂದ ತುಂಬಿ ಹೋಗಿ ಕಪ್ಪಾಗಿತ್ತು. ಸೂರ್ಯಾಸ್ತ ಸಮಯದಲ್ಲಿ ಬೆಟ್ಟದ ಮೇಲೆ ನೋಡಿದಾಗ ಇನ್ನೂ ಪೂರ್ಣವಾಗಿಲ್ಲದ ಚಂದ್ರ ಪ್ರಕಾಶಿಸುತ್ತಿದ್ದ. ನಾರ್ವೆ ಮತ್ತು ಸ್ವಿಟ್ಜರ್ಲೆಂಡ್ ದೇಶಗಳ ಅತಿ ಸುಂದರವಾದ ಪ್ರಶಾಂತವಾದ ದೃಶ್ಯಗಳಂತೆ ಇತ್ತು ಅದು. ಇಲ್ಲಿಯೇ ಮಾನವ ವಾಸಸ್ಥಳದ ಕೊನೆಯ ಮನೆಗಳನ್ನು ನೋಡಿದೆವು. ಸೇತುವೆ, ಒಂದು ತೋಟದ ಮನೆ, ಸುತ್ತಲೂ ಉತ್ತ ಹೊಲ, ಮತ್ತು ಅಲ್ಲೊಂದು ಇಲ್ಲೊಂದು ಗುಡಿಸಲುಗಳು ಇದ್ದವು. ಇಲ್ಲೆ ಒಂದು ಹುಲ್ಲು ಬಯ ಲಿನ ಮೂಲಕ ಮುಂದುವರಿದಾಗ ಯಾತ್ರಿಕರ ತಂಡವನ್ನು ಹಿಂದೆ ಯೇ ಬಿಟ್ಟು ಹೊರಟೆವು.

ಅವರ್ಣನೀಯವಾದ ನೈಸರ್ಗಿಕ ಸೌಂದರ್ಯದಲ್ಲಿ ಮೂರು ಸಾವಿರ ಯಾತ್ರಿಕರು ತಮ್ಮ ಮುಂದಿರುವ ಕಣಿವೆಯಲ್ಲಿ ಮುಂದು ವರಿದರು. ಮೊದಲನೆಯ ದಿನ ನಾವು ಪೈನ್ ಮರಗಳ ನಡುವೆ ಶಿಬಿರ ಮಾಡಿದೆವು. ಎರಡನೇ ದಿನ ಹಿಮಪಂಕ್ತಿಗಳನ್ನು ದಾಟಿ ಒಂದು ಘನೀಭೂತವಾದ ನದೀತೀರದಲ್ಲಿ ಡೇರೆಯನ್ನು ಹೂಡಿ ದೆವು. ಅಂದು ರಾತ್ರಿ ಶಿಬಿರಾಗ್ನಿಯನ್ನು ಜ್ಯೂನಿಪರ್ ಗಿಡಗಳಿಂದ ಮಾಡಿದರು. ಮಾರನೆ ದಿನ ಇನ್ನೂ ಮೇಲೆ ಶಿಬಿರವಾಯಿತು. ಅಂದು ಆ ಗಿಡಗಳನ್ನು ಆಳುಗಳು ಹುಡುಕಿಕೊಂಡು ತುಂಬಾ ಅಲೆದಾಡಿ ಕೊನೆಗೆ ಸ್ವಲ್ಪ ತಂದು ಬೆಂಕಿ ಹಚ್ಚಿದ್ದರು. ಮುಂದೆ ರಸ್ತೆ ಕೊನೆಗೊಂಡಿತು. ಕಾಡುದಾರಿಯಲ್ಲಿ ಕಡಿದಾದ ಸ್ಥಳದಲ್ಲಿ ಸ್ವಲ್ಪ ದೂರ ನಡೆದುಕೊಂಡು ಹೋದಮೇಲೆ ಗುಹೆ ಇರುವ ಒಂದು ಕಣಿವೆಯೊಳಗೆ ಬಂದೆವು. ನಾವು ಇಲ್ಲಿ ಮುಂದುವರಿದು ಹೋದಂತೆ ಬೆಟ್ಟಗಳು ಹೊಸದಾಗಿ ಬಿದ್ದ ಮಂಜಿನಿಂದ ಸಿಂಗರಿಸಿಕೊಂಡಂತೆ ಕಂಡವು. ಅನಂತರ ದೊಡ್ಡದೊಂದು ಗುಹೆಗೆ ಹೋದೆವು. ಅಲ್ಲಿ ಸೂರ್ಯರಶ್ಮಿ ಎಂದಿಗೂ ಬರಲಾರದು. ಅಲ್ಲೇ ಒಂದು ಮೂಲೆ ಯಲ್ಲಿ ದೊಡ್ಡದೊಂದು ಹಿಮಲಿಂಗ ಕಂಡಿತು. ಮೊದಲು ಇದನ್ನು ಕಂಡ ಕುರುಬರಿಗೆ ದೇವರೇ ಇವರಿಗಾಗಿ ಕಾಯುತ್ತಿದ್ದಂತೆ ಕಂಡಿರ ಬಹುದು.

ಯಾತ್ರಿಕರು ಏನು ಮಾಡಬೇಕೋ ಅದನ್ನೆಲ್ಲಾ ಸ್ವಾಮೀಜಿ ನೆರವೇರಿಸಿದರು. ಜಪ ಮಾಡಿದರು. ಉಪವಾಸವಿದ್ದರು, ಹತ್ತಿರ ಹರಿಯುತ್ತಿದ್ದ ಹಿಮಝರಿಯ ಪಂಚನದಿಗಳಲ್ಲಿ ಸ್ನಾನ ಮಾಡಿ ದರು. ಈಗ ಗುಹೆಯನ್ನು ಪ್ರವೇಶ ಮಾಡಿದ ಮೇಲೆ ಶಿವನೇ ಅವ ರಿಗೆ ಕಂಡಂತೆ ಇತ್ತು. ಯಾತ್ರಿಕರ ಗುಜುಗುಂಪು, ಮೇಲೆ ಹಾರಾಡು ತ್ತಿದ್ದ ಪಾರಿವಾಳಗಳು ಇವುಗಳ ನಡುವೆ ಸ್ವಾಮೀಜಿ ಯಾರಿಗೂ ಗೋಚರವಾಗದಂತೆ ಎರಡು ಮೂರು ವೇಳೆ ನಮಸ್ಕರಿಸಿದರು. ಅನಂತರ ಎಲ್ಲಿ ಭಾವವಶನಾಗುವೆನೋ ಎಂದು ಅಂಜಿ ಎದ್ದು ಮೌನವಾಗಿ ಹೊರಗೆ ಹೊರಟರು. ಈ ಅಲ್ಪ ಸಮಯದಲ್ಲಿ ಶಿವ ಇವರಿಗೆ ಅಮರನಾಗುವ ವರ ಕೊಟ್ಟನೆಂದು ಹೇಳುತ್ತಿದ್ದರು. ಎಂದರೆ ತಾವೇ ಇಚ್ಛಿಸಿದಾಗ ಮಾತ್ರ ಸಾಯುವುದು. ಬಾಲ್ಯ ದಿಂದಲೂ ಅವರಲ್ಲಿ ತಾವೊಂದು ಶಿವದೇವಾಲಯದಲ್ಲಿ ಪ್ರಾಣ ಬಿಡುತ್ತೇನೆಂಬ ಭಾವನೆ ಬಂದು ಹೋಗಿತ್ತು. ಇದರಿಂದ ಆ ಭಾವನೆ ಈಡೇರಿತೋ ವಿಫಲವಾಯಿತೋ ಗೊತ್ತಿಲ್ಲ.

ಗುಹೆಯ ಹೊರಗೆ ಪುರೋಹಿತರ ಕಾಟವಿರಲಿಲ್ಲ. ಅಮರ ನಾಥನ ಗುಹ ಸರಳವಾಗಿದೆ. ನೈಸರ್ಗಿಕ ಸೌಂದರ್ಯದ ಪಕ್ಕದಲ್ಲೇ ಇದೆ. ಪೂರ್ಣಿಮೆ ರಕ್ಷಾಬಂಧನದ ದಿನ. ಅಂದೇ ಯಾತ್ರೆ ಕೊನೆ ಗೊಳ್ಳುವುದು. ನಮ್ಮ ಕೈಗೆ ಕೆಂಪು ಮತ್ತು ಹಳದಿಯ ಪವಿತ್ರ ದಾರ ಗಳನ್ನು ಕಟ್ಟಿಕೊಂಡವು. ಅನಂತರ ನನ್ನ ಡೇರೆಗೆ ಬರುವುದಕ್ಕೆ ಮುಂಚೆ ಝರಿಯ ಹತ್ತಿರದ ಒಂದು ಬಂಡೆಯ ಮೇಲೆ ಊಟ ಮಾಡಿ ಸ್ವಲ್ಪ ವಿಶ್ರಮಿಸಿಕೊಂಡೆವು.

ಸ್ವಾಮೀಜಿಯವರಂತೂ ಆ ಸ್ಥಳದ ವಿಷಯವಾಗಿಯೇ ತನ್ಮಯ ರಾಗಿ ಹೋಗಿದ್ದರು. ಇಷ್ಟೊಂದು ರಮ್ಯವಾದ ಸ್ಥಳಕ್ಕೆ ತಾವೆಂದೂ ಹಿಂದೆ ಹೋಗಿರಲಿಲ್ಲವೆಂದು ಭಾವಿಸಿದ್ದರು. ಬಹಳ ಹೊತ್ತು ಮೌನ ವಾಗಿ ಕುಳಿತರು. ಅನಂತರ ಮೆಲ್ಲಗೆ ಹೀಗೆ ಹೇಳತೊಡಗಿದರು : ''ಈ ಗುಹೆಯನ್ನು ಮೊದಲು ಹೇಗೆ ಕಂಡುಹಿಡಿದರು ಎಂಬು ದನ್ನು ನಾನು ಚೆನ್ನಾಗಿ ಕಲ್ಪಿಸಿಕೊಳ್ಳಬಲ್ಲೆ. ಬೇಸಗೆಯಲ್ಲಿ ಒಂದು ಸಲ ಕುರಿಗಳು ಮುಂದೆ ತಪ್ಪಿಸಿಕೊಂಡಿರಬಹುದು. ಕುರುಬರು ಅದನ್ನು ಹುಡುಕಿಕೊಂಡು ಇಲ್ಲಿಗೆ ಬಂದಿರಬಹುದು. ಅನಂತರ ಅವರು ಮನೆಗೆ ಹಿಂತಿರುಗಿದ ಮೇಲೆ ಸಾಕ್ಷಾತ್ ಮಹಾದೇವನೇ ತಮಗೆ ಕಂಡನೆಂದು ನೆರೆಯವರಿಗೆ ಹೇಳಿರಬಹುದು.''

ಹೇಗಾದರೂ ಇರಲಿ, ನನ್ನ ಗುರುದೇವನ ಜೀವನದಲ್ಲಾದರೂ ಈ ಕಥೆ ನಿಜವೆಂದು ಕಾಣುವುದು. ಆ ಶಿವಲಿಂಗದ ಪವಿತ್ರತೆ ಮತ್ತು ಅದರ ಧವಳಕಾಂತಿಗೆ ಇವರು ಮಾರುಹೋಗಿ ತನ್ಮಯರಾದರು. ಕೈಲಾಸದ ರಹಸ್ಯವೇ ಅವರಿಗೆ ಗುಹೆಯಲ್ಲಿ ವ್ಯಕ್ತವಾದಂತೆ ಇತ್ತು. ಅನಂತರ ತಾವು ಬದುಕಿರುವ ಪರ್ಯಂತ ಅವರು ಆ ಬೆಟ್ಟದ ಗುಹೆಯನ್ನು ಹೇಗೆ ಪ್ರವೇಶ ಮಾಡಿದರು, ಸಾಕ್ಷಾತ್ ಮಹಾ ದೇವನನ್ನು ಕಂಡರು ಎಂಬುದನ್ನು ಮರೆಯಲಿಲ್ಲ. *('ನಾ ಕಂಡಂತೆ ನನ್ನ ಗುರು ದೇವ', ಸೋದರಿ ನಿವೇದಿತಾ, ಪು.೭೯-೮೩, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, ೮ನೇ ಮುದ್ರಣ, ೨೦೧೪.)*

# ‘ಸ್ವಾಮಿ ವಿವೇಕಾನಂದರೊಂದಿಗೆ ಪ್ರವಾಸ -ಕೆಲವು ಟಿಪ್ಪಣಿಗಳು’, ಗ್ರಂಥದಿಂದ ಆಯ್ದ ಭಾಗಗಳು

ಗುರುವಾರ ಪಹಲ್‌ಗಾಮ್ ತಲುಪಿದ ನಾವು ಕಣಿವೆಯ ಕೆಳಭಾಗದ ಕೊನೆಯಲ್ಲಿ ನಮ್ಮ ಬಿಡದಿಯನ್ನು ಸ್ಥಾಪಿಸಿಕೊಂಡೆವು. ಮುಂದಿನ ತಂಗುದಾಣ ಚಂದನ್‌ವಾಡಿಗೆ ಹೋಗುವ ಹಾದಿ ಅದೆಷ್ಟು ಸುಂದರವಾಗಿತ್ತು! ಅಲ್ಲಿ ನಾವು ಕಮರಿಯೊಂದರ ಅಂಚಿನಲ್ಲಿ ಬೀಡುಬಿಟ್ಟೆವು. ಮಧ್ಯಾಹ್ನವೆಲ್ಲ ಮಳೆ ಸುರಿಯಿತು. ಸ್ವಾಮಿಗಳು ನನ್ನನ್ನು ಮಾತನಾಡಿಸುವುದಕ್ಕೆಂದು ಕೇವಲ ಐದು ನಿಮಿಷಗಳ ಭೇಟಿಗೆ ಬಂದರು. ಆದರೆ ಇನ್ನಿತರ ಯಾತ್ರಿಕರಿಂದ, ನನಗೆ ಅದೆಷ್ಟೋ ಮನ ಮುಟ್ಟುವಂತಹ ಆದರ ದೊರೆಯಿತು... ಚಂದನ್‌ವಾಡಿಯ ಬಳಿ ಬಂದಾಗ ಸ್ವಾಮಿಗಳು ನಾನು ನನ್ನ ಮೊಟ್ಟಮೊದಲ ನೀರ್ಗಲ್ಲ ಪರ್ವತಾರೋಹಣವನ್ನು ಕೈಕೊಳ್ಳಬೇಕೆಂದು ಆಗ್ರಹಿಸಿದರು; ಆಸಕ್ತಿ ಕೆರಳಿಸುವ ಪ್ರತಿಯೊಂದು ವಿವರವನ್ನೂ ನನಗೆ ತಿಳಿಸಿ ಹೇಳಿದರು. ಮುಂದೆ ಅನೇಕ ಸಾವಿರ ಅಡಿಗಳ ಅದ್ಭುತ ಆರೋಹಣದ ಅನುಭವ ನನ್ನದಾಯಿತು. ನಂತರ ಪರ್ವತಗಳನ್ನು ಒಂದಾದ ಮೇಲೊಂದರಂತೆ ಸುತ್ತಿ ಸುತ್ತಿ ಹೋಗುವ ಕಿರಿದಾದ ಕಾಲುಹಾದಿಯಲ್ಲಿನ ದೀರ್ಘನಡಿಗೆ; ಕೊನೆಗೆ ಇನ್ನೊಂದು ಕಡಿದಾದ ಪರ್ವತಾರೋಹಣ. ಮೊದಲನೆಯ ಪರ್ವತದ ತುಟ್ಟತುದಿಯಲ್ಲಿ ಉಣ್ಣೆಯಂಥ ಎಲೆಗಳ, ಬಿಳಿಹೂಗಳ ಪುಟ್ಟಗಿಡಗಳ ನೆಲಹಾಸು. ಅನಂತರ, ನಿಷ್ಕ್ರಿಯ ನೀರಿನಿಂದ ಕೂಡಿದ ಹಾದಿಯು ಶೇಷನಾಗಕ್ಕಿಂತ ಇನ್ನೂ ಐನೂರು ಅಡಿ ಎತ್ತರಕ್ಕೆ ಹಾದುಹೋಯಿತು; ಕೊನೆಗೊಮ್ಮೆ ನಾವು ಸುಮಾರು ಹದಿನೆಂಟು ಸಾವಿರ ಅಡಿ ಎತ್ತರದ ಮಂಜು ಮುಸುಕಿದ ಶಿಖರಗಳೆಡೆಯಲ್ಲಿ ಚಳಿಯ ಜೌಗು ಪ್ರದೇಶವೊಂದರಲ್ಲಿ ಬೀಡುಬಿಟ್ಟೆವು. ಫರ್ (ಭದ್ರದಾರು) ಮರಗಳು ತೀರ ಕೆಳಗಿದ್ದವು; ಹಾಗಾಗಿ ಕೂಲಿಗಳು ಮಧ್ಯಾಹ್ನ ಹಾಗೂ ಸಂಜೆಯಿಡೀ ದಿಕ್ಕುದಿಕ್ಕುಗಳಲ್ಲಿ ಸಂಚರಿಸಿ ಜೂನಿಪರ್ (ಎಣ್ಣೆ ಇರುವ ಒಂದು ಜಾತಿಯ ಹಸಿರುಪೊದೆ)ಗಳನ್ನು ಸಂಗ್ರಹಿಸಬೇಕಾಯಿತು. ತಹಶೀಲ್ದಾರರ, ಸ್ವಾಮೀಜಿಯವರ ಹಾಗೂ ನನ್ನ ಡೇರೆಗಳು ಹತ್ತಿರವಾಗಿದ್ದವು; ಸಂಜೆಗತ್ತಲಿನಲ್ಲಿ ಇವುಗಳ ಮುಂದೆ ದೊಡ್ಡದಾಗಿ ಬೆಂಕಿಯನ್ನು ಹಚ್ಚಿದೆವು. ಆದರೆ ಅದು ಚೆನ್ನಾಗಿ ಉರಿಯಲಿಲ್ಲ; ಅನೇಕ ಅಡಿಗಳ ಕೆಳಕ್ಕೆ ಹಿಮನದಿಯೇ ಇತ್ತು. ಬೀಡುಬಿಟ್ಟ ಮೇಲೆ ನಾನು ಸ್ವಾಮಿಗಳನ್ನು ನೋಡಲಿಲ್ಲ.

ಪಂಚತರಣಿ – ಐದು ಝರಿಗಳ ಪ್ರದೇಶ – ಅಲ್ಲಿಂದ ಹೆಚ್ಚೇನೂ ದೂರವಿರಲಿಲ್ಲ. ಅಲ್ಲದೆ ಅದು ಶೇಷನಾಗಕ್ಕಿಂತ ಕೆಳಕ್ಕೆ ಇತ್ತು; ಚಳಿ ಶುಷ್ಕವಾಗಿದ್ದರೂ ಉಲ್ಲಾಸದಾಯಕವಾಗಿತ್ತು. ನಮ್ಮ ಬಿಡದಿಯ ಮುಂದೆ ಅಗಲವಾದ ಒಂದು ನದೀಪಾತ್ರ; ಅದರ ನಡುವೆ ಹರಿಯುತ್ತಿದ್ದವು ಆ ಐದು ಝರಿಗಳು. ಯಾತ್ರಿಕರು ಒಂದರಲ್ಲಿ ಮುಳುಗಿ ಎದ್ದ ಮೇಲೆ ಒದ್ದೆ ಬಟ್ಟೆಯಲ್ಲಿಯೇ ಇನ್ನೊಂದಕ್ಕೆ ಹೋಗುತ್ತ ಅವೆಲ್ಲವುಗಳಲ್ಲೂ ಮೀಯಬೇಕಾಗಿತ್ತು. ಈ ಆಚರಣೆಯಿಂದ ಜಾರಿಕೊಳ್ಳಲೆತ್ನಿಸದೆ ಸ್ವಾಮೀಜಿ ಈ ವಿಚಾರದಲ್ಲಿ ನಿಯಮವನ್ನು ಅಕ್ಷರಶಃ ಪಾಲಿಸಿದರು....




ಈ ಔನ್ನತ್ಯಗಳಲ್ಲಿ ಅನೇಕ ಬಾರಿ ಬೃಹತ್ ವೃತ್ತಾಕಾರದಲ್ಲಿ ಸುತ್ತುವರಿದ ಮಂಜು ಮುಸುಕಿದ ಶಿಖರಗಳ ಆವರಣದಲ್ಲಿ ನಾವಿರುವ ದಿವ್ಯಾನುಭವವನ್ನು ಪಡೆದೆವು – ಹಿಂದೂಗಳ ಮನಸ್ಸಿಗೆ ಬೂದಿಬಳಿದ ದೇವರ ಕಲ್ಪನೆಯನ್ನು ತಂದುಕೊಟ್ಟಿರುವ ಆ ಮೌನ ವಾಂತ ಭೌಮಗಳು!

ಮಂಗಳವಾರ, ಆಗಸ್ಟ್ ೨ರಂದು, ಅಮರನಾಥದ ಮಹಾದಿನ, ಯಾತ್ರಿಕರ ಮೊದಲ ಗುಂಪು ಬಹುಶಃ ಬಿಡದಿಯನ್ನು ಎರಡು ಗಂಟೆಗೆ ಬಿಟ್ಟಿರಬೇಕು! ನಾವು ಪೂರ್ಣಚಂದ್ರನ ಬೆಳಕಿನಲ್ಲಿ ಬಿಟ್ಟು ಹೊರಟೆವು. ಕಿರಿದಾದ ಕಣಿವೆಯೊಳಗಿನಿಂದ ನಾವು ಹೋಗುತ್ತಿದ್ದಂತೆ ಸೂರ್ಯೋದಯವಾಯಿತು. ಈ ಭಾಗದ ಪಯಣ ಕ್ಷೇಮಕರವಲ್ಲ. ಆದರೆ ನಮ್ಮ ದಂಡಿಗಳನ್ನು ಬಿಟ್ಟು ಪರ್ವತ ಹತ್ತುವುದಕ್ಕೆ ಆರಂಭಿಸುತ್ತಲೂ ನಿಜವಾದ ಅಪಾಯ ಎದುರಾಯಿತು... ನಂತರ, ಕೊನೆಗೊಮ್ಮೆ ಮುಂದಿನ ಏರಿನ ತಳಕ್ಕೆ ಹೋಗಿ ಸೇರಿದ ಮೇಲೆ, ನಾವು ಹಿಮನದಿಯೊಟ್ಟಿಗೇ ಒಂದಾದ ಮೇಲೊಂದರಂತೆ ಮೈಲಿಗಳನ್ನು ಕಷ್ಟಪಟ್ಟು ಸವೆಸಬೇಕಾಯಿತು, ಗುಹೆಯನ್ನು ತಲುಪಲು .... ಇಷ್ಟರಲ್ಲಿ ತೀರ ಆಯಾಸಗೊಂಡಿದ್ದ ಸ್ವಾಮಿಗಳು ಹಿಂದೆ ಬಿದ್ದಿದ್ದರು... ಕೊನೆಗೊಮ್ಮೆ ಬಂದು ತಲುಪಿದ ಅವರು, ತಾವು ಸ್ನಾನ ಮಾಡುವುದಾಗಿ ಹೇಳಿ ನನ್ನನ್ನು ಮುಂದಕ್ಕೆ ಕಳುಹಿಸಿದರು. ಅರ್ಧ ಗಂಟೆಯ ನಂತರ ಅವರು ಗುಹೆಯನ್ನು ಹೊಕ್ಕರು. ಮಂದಹಾಸವನ್ನು ಬೀರುತ್ತ, ಅರ್ಧವೃತ್ತಾಕಾರದ ಒಂದು ಕಡೆ ಮಂಡಿಯೂರಿ ನಮಸ್ಕರಿಸಿದರು; ನಂತರ ಇನ್ನೊಂದು ಕಡೆಯೂ ಹಾಗೆಯೇ ಮಾಡಿದರು. ಜಾಗವು ಅಲ್ಲೊಂದು ದೇಗುಲವನ್ನೇ ಕಟ್ಟಬಹುದಾದಷ್ಟು ದೊಡ್ಡದಾಗಿದ್ದಿತು; ಗಾಢವಾದ ನೆರಳಿನ ಆಯಕಟ್ಟಿನ ಗೂಡೊಂದರಲ್ಲಿ ನೀರ್ಗಲ್ಲ ಶಿವಲಿಂಗವು ತನ್ನದೇ ಪಾಣಿಪೀಠದ ಮೇಲೆ ತಾನೇ ಆವಿರ್ಭವಿಸಿರುವಂತೆ ಇತ್ತು. ಕೆಲವು ನಿಮಿಷಗಳಾದ ನಂತರ ಸ್ವಾಮಿಗಳು ಗುಹೆಯಿಂದ ಹೊರಗೆ ಬಂದರು.

ಅವರಿಗೆ ಸ್ವರ್ಗವೇ ಬಗೆಗಣ್ಣ ಮುಂದೆ ತೆರೆದಂತಾಗಿತ್ತು. ಶಿವನ ಪಾದಗಳನ್ನು ಅವರು ಸ್ಪರ್ಶಿಸಿದ್ದರು. ‘ತಲೆಸುತ್ತಿ ಬಂದು ಬೀಳದ ಹಾಗೆ’ ತಮ್ಮನ್ನು ತಾವು ಕಷ್ಟಪಟ್ಟು ನಿಯಂತ್ರಿಸಿಕೊಳ್ಳಬೇಕಾಯಿತೆಂದು ಅನಂತರ ಅವರು ಹೇಳಿದರು. ಆದರೆ ಅವರ ದೇಹದ ಆಯಾಸ ಅದೆಷ್ಟಾಗಿತ್ತೆಂದರೆ ಹೃದಯವು ಆಗಲೇ ತನ್ನ ಕೆಲಸವನ್ನು

ನಿಲ್ಲಿಸಿಬಿಡಬೇಕಾಗಿತ್ತು, ಬದಲಿಗೆ ಶಾಶ್ವತವಾಗಿ ಹಿರಿದಾಗಿಬಿಟ್ಟಿದೆ ಎಂದು ಆ ನಂತರ ವೈದ್ಯರೊಬ್ಬರು ಹೇಳಿದರು. ಅಚ್ಚರಿ ಅವರ ಗುರುಗಳ ಆ ಮಾತು – ''ಅವನು ತಾನಾರೆಂಬುದನ್ನು ಯಾವಾಗ ಅರಿತುಕೊಳ್ಳುವನೋ ಆಗಲೇ ಈ ಶರೀರವನ್ನು ತ್ಯಜಿಸಿ ಬಿಡುವನು!'' ಎಂಬುದು – ಸಫಲವಾಗುವುದಕ್ಕೆ ಅದೆಷ್ಟು ಸಮೀಪ ಬಂದಿದ್ದರು ಅವರು !

ಅರ್ಧಗಂಟೆಯ ನಂತರ, ನನ್ನ ಹಾಗೂ ಆ ದಯಾಮಯ ನಗ್ನ ಸಾಧುವಿನ ಜೊತೆಗೆ ಝರಿಯ ಪಕ್ಕದ ಬಂಡೆಯೊಂದರ ಮೇಲೆ ಕುಳಿತು ಬುತ್ತಿಯನ್ನು ಬಿಚ್ಚಿ ತಿನ್ನುತ್ತ ''ನಾನು ಅದೆಂತಹ ಆನಂದಾನುಭವವನ್ನು ಪಡೆದೆ!'' ಎಂದರವರು. ''ಮಂಜುಗಡ್ಡೆಯ ಲಿಂಗವು ಸಾಕ್ಷಾತ್‌ಶಿವನೆಂದೇ ಬಗೆದೆ. ಕಳ್ಳ ಬ್ರಾಹ್ಮಣರು ಇಲ್ಲಿರಲಿಲ್ಲ, ಯಾವ ವ್ಯಾಪಾರವಿಲ್ಲ, ಯಾವ ಅಡಚಣೆಯೂ ಇಲ್ಲ, ಎಲ್ಲವೂ ಪೂಜಾಮಯ! ನಾನೆಂದೂ ಯಾವ ತೀರ್ಥ ಯಾತ್ರೆಯಲ್ಲೂ ಇಷ್ಟೊಂದು ಆನಂದವನ್ನು ಅನುಭವಿಸಿರಲಿಲ್ಲ ! ''

ಆ ನಂತರ ಅವರು ಆಗಾಗ ತಮ್ಮನ್ನು ಆನಂದಪರಾಕಾಷ್ಠೆಗೆ ಕೊಂಡೊಯ್ದ ಅಂದಿನ ದರ್ಶನದ ಅದ್ಭುತ ಅನುಭವವನ್ನು ಕುರಿತು ಹೇಳುತ್ತಿದ್ದರು. ಆ ಶ್ವೇತವರ್ಣದ ನೀರ್ಗಲ್ಲಿನ ಶಿವಲಿಂಗದ ಕಾವ್ಯಮಯತೆಯನ್ನು ವರ್ಣಿಸುವರು; ಬೇಸಿಗೆಯ ಒಂದು ದಿನ ತಮ್ಮ ಕುರಿಗಳನ್ನು ಅರಸಿಕೊಂಡು ತಿರುಗುತ್ತಿದ್ದ ಕುರುಬ ಹುಡುಗರ ಗುಂಪೊಂದು ಮೊಟ್ಟಮೊದಲು ಆ ಗವಿಯನ್ನು ಪ್ರವೇಶಿಸಿ ಎಂದೂ ಕರಗದ ಆ ಶಿವಲಿಂಗವನ್ನು – ಭಗವಂತನ ಸನ್ನಿಧಿಯನ್ನು– ಆವಿಷ್ಕರಿಸಿರಬೇಕು ಎಂದು ಊಹಿಸಿದವರೂ ಅವರೇ. ತಮಗೆ ಅಲ್ಲಿ ಅಮರನಾಥನ ಕೃಪೆ ಲಭಿಸಿತೆಂದೂ, ತಾನು ಅನುಮತಿ ಕೊಡುವವರೆಗೆ ದೇಹತ್ಯಾಗ ಮಾಡಕೂಡದೆಂದು ಭಗವಂತನ ಆಣತಿ ತಮಗಾಯಿತೆಂದೂ ಯಾವಾಗಲೂ ಹೇಳುತ್ತಿದ್ದರು. ನನಗೆ ಅವರು ಹೇಳಿದರು: ''ನಿನಗೀಗ ಅರ್ಥವಾಗುವುದಿಲ್ಲ. ಆದರೆ ನೀನು ತೀರ್ಥಯಾತ್ರೆ ಮಾಡಿ ಬಂದಿರುವೆ, ಅದು ಕೆಲಸಮಾಡುತ್ತಾ ಹೋಗುತ್ತದೆ. ಕಾರಣಗಳು ಪರಿಣಾಮಗಳನ್ನುಂಟುಮಾಡಲೇಬೇಕು. ಅನಂತರ ನೀನು ಅರ್ಥಮಾಡಿಕೊಳ್ಳುವೆ. ಪರಿಣಾಮಗಳು ಬಂದೇ ಬರುವುವು''.

ಮಾರನೆಯ ಬೆಳಗ್ಗೆ ಅಲ್ಲಿಂದ ಪಹಲ್‌ಗಾಮ್‌ಗೆ ನಾವು ಹಿಂದಿರುಗಿ ಹೊರಟ ಹಾದಿ ಅದೆಷ್ಟು ಸುಂದರವಾಗಿತ್ತು! ಅಂದಿನ ರಾತ್ರಿ ನಾವು ಮುಂದಿನ ಹಂತದವರೆಗೆ ನಡೆದು ಮಂಜು ಮುಸುಕಿದ ಹಾದಿಯಲ್ಲೇ ಒಂದು ಕಡೆ ಡೇರೆಗಳನ್ನು ಸ್ಥಾಪಿಸಿಕೊಂಡು ತಂಗಿದೆವು. ಇಲ್ಲಿ ನಾವು ಕೂಲಿಯೊಬ್ಬನಿಗೆ ಕೆಲವು ಆಣೆಗಳನ್ನು ಕೊಟ್ಟು ನಮ್ಮ ಒಂದು ಪತ್ರವನ್ನು ತೆಗೆದುಕೊಂಡು ಮುಂದೆ ಹೋಗೆಂದು ಕಳುಹಿಸಿದೆವು. ಆದರೆ ನಾವು ಮಾರನೆಯ ದಿನ ಮಧ್ಯಾಹ್ನ ತಲುಪಿದಾಗ ಅದು ಅನವಶ್ಯಕವಾಗಿತ್ತೆಂದು ಗೊತ್ತಾಯಿತು; ಏಕೆಂದರೆ ಬೆಳಗಿನಿಂದಲೂ ತಂಡ ತಂಡವಾಗಿ ಡೇರೆಗಳನ್ನು ಹೊತ್ತು ಬರುತ್ತಿದ್ದ ಯಾತ್ರಿಕರ ಗುಂಪುಗಳು ಅತ್ಯಂತ ಸ್ನೇಹದಿಂದ ನಮ್ಮ ಕುಶಲವನ್ನು ವಿಚಾರಿಸುತ್ತ, ನಾವು ಬರುವ ಸುದ್ದಿಯನ್ನು ಮುಂದಕ್ಕೆ ಕೊಂಡೊಯ್ಯುತ್ತ ಸಾಗುತ್ತಿದ್ದರು. ರಾತ್ರಿ ಕಳೆದು ಬೆಳಗಾಗುತ್ತಲೂ ಸೂರ್ಯೋದಯಕ್ಕಿಂತ ಮುಂಚೆಯೇ ನಾವು ದಾರಿ ನಡೆಯತೊಡಗಿದ್ದೆವು. ನಮ್ಮ ಮುಂದೆ ಸೂರ್ಯನು ಉದಯಿಸಿ ಮೇಲೆ ಬರುತ್ತಿದ್ದಂತೆ, ಹಿಂದುಗಡೆ ಚಂದ್ರನು ಮುಳುಗುತ್ತಿದ್ದಂತೆ, ನಾವು ಮೃತ್ಯು ಸರೋವರದ ಮೇಲೆ ಹಾದುಹೋದೆವು. ಇಲ್ಲಿ ಒಂದಾನೊಂದು ವರ್ಷ ಹಿಮನದಿಯ ಪ್ರವಾಹಕ್ಕೆ ಸಿಕ್ಕಿ ಸುಮಾರು ನಲವತ್ತು ಮಂದಿ ಯಾತ್ರಿಕರು ಭೂಗತರಾಗಿದ್ದರು.

ಇದಾದ ನಂತರ ನಾವು ಕಡಿದಾದ ಒಂದು ಶಿಖರದಿಂದ ಕೆಳಗಿಳಿಯುವ ಕಿರಿದಾದ ಒಂದು ಮೇಕೆದಾಟಿನಂತಹ ದಾರಿಯನ್ನು ಹಿಡಿದು ಸಾಗಿ ಪ್ರಯಾಣದ ದೂರವನ್ನು ಬಹುಮಟ್ಟಿಗೆ ಕಡಿಮೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಯಿತು. ಈ ಹಾದಿಯಲ್ಲಿ ನಾವು ಚತುಷ್ಪಾದಿಗಳಾಗಿಯೇ ಸಾಗಬೇಕಾಯಿತು; ಪ್ರತಿಯೊಬ್ಬರೂ ಅಂಬೆಗಾಲಿಡುತ್ತ ಜೀವವನ್ನು ಕೈಯಲ್ಲಿಟ್ಟುಕೊಂಡು ಮುನ್ನಡೆಯಬೇಕಾಯಿತು. ತಳವನ್ನು ಸೇರಿದಾಗ ಅಲ್ಲಿ ಗ್ರಾಮಸ್ಥರು ಬೆಳಗಿನ ತಿಂಡಿಯಂಥದನ್ನು ಸಿದ್ಧಪಡಿಸುತ್ತಿದ್ದರು. ಒಲೆಗಳು ಉರಿಯುತ್ತಿದ್ದವು, ಚಪಾತಿಗಳು ಬೇಯುತ್ತಿದ್ದವು, ಟೀ ಬಿಸಿಯಾಗಿ ಕುಡಿಯುವುದಕ್ಕೆ ಸಿದ್ಧವಾಗಿದ್ದಿತು. ಇಲ್ಲಿಂದ ಮುಂದಕ್ಕೆ ಯಾತ್ರಿಕರ ಒಂದೊಂದು ಗುಂಪೂ ಮುಖ್ಯವಾಹಿನಿಯನ್ನು ಬಿಟ್ಟು ಬೇರೆಯಾಗಿ ತಮ್ಮ ತಮ್ಮ ದಾರಿಯನ್ನು ಹಿಡಿಯತೊಡಗಿದರು. ಇಷ್ಟು ದಿನಗಳೂ ಇಡಿಯ ಪ್ರವಾಸದುದ್ದಕ್ಕೂ ನಮ್ಮೆಲ್ಲರಲ್ಲಿಯೂ ಬೆಳೆದಿದ್ದ ನಾವೆಲ್ಲರೂ ಒಂದೇ ಎಂಬ ಒಗ್ಗಟ್ಟಿನ ಭಾವನೆಯು ಕ್ರಮೇಣ ಕಡಿಮೆಯಾಗುತ್ತ ಹೋಯಿತು.

ಆ ಸಂಜೆ ಪಹಲ್‌ಗಾಮ್‌ಗಿಂತ ಸ್ವಲ್ಪ ಎತ್ತರದ ದಿಣ್ಣೆಯೊಂದರ ಮೇಲೆ ಪೈನ್ ದಿಮ್ಮಿಗಳನ್ನು ಉರಿಸಿ ಮಾಡಿದ ದೊಡ್ಡ ಬೆಂಕಿಯಲ್ಲಿ ಕಾಯಿಸಿಕೊಳ್ಳುತ್ತ, ಸುತ್ತಲೂ ನೆಲಕ್ಕೆ ಹಾಸಿದ ಜಮಖಾನಗಳ ಮೇಲೆ ಕುಳಿತು ನಾವೆಲ್ಲರೂ ಮಾತನಾಡತೊಡಗಿದೆವು. ಮಿತ್ರರಾದ ನಗ್ನ ಸ್ವಾಮಿಗಳೂ ನಮ್ಮನ್ನು ಬಂದು ಕೂಡಿಕೊಂಡರು; ಬೇಕಾದಷ್ಟು ತಮಾಷೆಮಾಡಿಕೊಂಡೆವು; ಕಾಡುಹರಟೆ ಹೊಡೆದೆವು. ಎಲ್ಲರೂ ಹೊರಟುಹೋಗಿ ನಮ್ಮ ಪುಟ್ಟ ಗುಂಪು ಮಾತ್ರವೇ ಉಳಿದ ಮೇಲೆ, ಜೊತೆಗೆ ಉಳಿದದ್ದು ತಲೆಯ ಮೇಲಿನ ಚಂದ್ರ, ಎತ್ತರದ ಮಂಜಿನ ಶಿಖರಗಳು, ಭೋರ್ಗರೆವ ನದಿಗಳು ಹಾಗೂ ಪರ್ವತದ ಪೈನ್ ವೃಕ್ಷಗಳು. ಸ್ವಾಮಿಗಳು ಅಮರನಾಥದ ಗುಹೆಯ ಬಗ್ಗೆ , ಶಿವನ ಬಗ್ಗೆ ಹಾಗೂ ಮನಸ್ಸಿನಲ್ಲುಳಿದಿದ್ದ ಮಹಾದರ್ಶನದ ಬಗ್ಗೆ ಮಾತನಾಡಿದರು.

ಮಾರನೆಯ ದಿನ ನಾವು ಇಸ್ಲಾಮಾಬಾದ್ ಕಡೆಗೆ ಹೊರಟೆವು; ಸೋಮವಾರ ಬೆಳಗ್ಗೆ ನಾವು ಬೆಳಗಿನ ತಿಂಡಿಯನ್ನು ಮುಗಿಸುತ್ತಿದ್ದಂತೆ ನಮ್ಮನ್ನೆಲ್ಲ ಕ್ಷೇಮವಾಗಿ ಶ್ರೀನಗರಕ್ಕೆ ಕರೆತಂದು ಸೇರಿಸಲಾಯಿತು. ✽

*('ಸ್ವಾಮಿ ವಿವೇಕಾನಂದರೊಂದಿಗೆ ಪ್ರವಾಸ – ಕೆಲವು ಟಿಪ್ಪಣಿಗಳು', ಸೋದರಿ ನಿವೇದಿತಾ, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೯, ಪು.೬೧೪-೬೧೮)*